ಇನ್ನು ಎರಡನೆಯುದಾಗಿ, ಇದರಲ್ಲಿ ಕೇಂದ್ರದ ಒಂದು ರೀತಿ ಇದೆ. ಅದೇನೆಂದರೆ, ನಾವು ಕಾಗದವನ್ನು ತಯಾರಿಸಬೇಕಾದರೆ ಅವರು ಕೆಲವು ರೇಟುಗಳನ್ನು ಫಿಕ್ಸ್ ಮಾಡುತ್ತಾರೆ. ಅವರು ಫಿಕ್ಸ್ ಮಾಡಿದ ರೇಟಿಗೇ ನಾವು ಕಾಗದವನ್ನು ಮಾರಬೇಕಾಗುತ್ತದೆ. ಒಂದುರೀತಿಯಿಂದ ತೊಂದರೆಯಾಗುತ್ತದೆ. ಈ ತೊಂದರೆಯಿಂದಾಗಿ ಅನೇಕ ಸಾರಿ ಲಾಭಗಳಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಏನು ರೇಟು ಫಿಕ್ಸ್ ಮಾಡುತ್ತಾರೆ ಆ ರೇಟಿಗೆ ನಾವು ಮಾರಾಟ ಮಾಡಬೇಕಾದ್ದರಿಂದ. ಈ ಕಾರಣದಿಂದಲೂ ಕೂಡ ಕೆಲವು ಸಾರಿ ಲಾಭ ಅಥವಾ ನಷ್ಟ ಆಗುವುದಕ್ಕೆ ಅವಕಾಶವಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನಾನು ಒಂದು ವಿವರಣೆಯನ್ನು ಕೇಳುತ್ತಿದ್ದೇನೆ, ನಷ್ಟದಲ್ಲಿದ್ದರೆ ಎಷ್ಟು ನಷ್ಟ ? ಲಾಭದಲ್ಲಿದ್ದರೆ ಎಷ್ಟು ಲಾಭ ಬಂದಿದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕು ?

ಶ್ರೀ ಎಂ. ರಘುಪತಿ.—ಈಗ ನನ್ನಬಳಿ ವಿವರಗಳಿಲ್ಲ. ವಿವರಗಳನ್ನು ಕಳುಹಿಸಿ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಪ್ರಶ್ನೆ ಸ್ಪಷ್ಟವಾಗಿದೆ. ಸರ್ಕಾರಿ ಉದ್ಯಮಗಳಿಂದ ೧೯೮೫-೮೬-೮೭-೮೮ಕ್ಕೆ ಬಂದಿರುವ ಲಾಭ ಹಾಗೂ ನಷ್ಟ ಎಷ್ಟು ಎಂದು ಸ್ಪಷ್ಟವಾಗಿ ಪ್ರಶ್ನೆ ಇದೆ. ಲಾಭ ಮತ್ತು ನಷ್ಟ ಇಷ್ಟು ಇದೆ ಎಂದು ಮಾನ್ಯ ಸಚಿವರು ಹೇಳಲಿ.

ಅಧ್ಯಕ್ಷರು.—ಬ್ಯೂರೋ ಆಫ್ ಎಂಟರ್ ಪ್ರೈಸಸ್‌ರವರು ಒಂದು ದೊಡ್ಡ ಲಿಸ್ಟನ್ನೇ ಕೊಟ್ಟಿದ್ದಾರೆ. ೧೯೮೫-೮೬ರ ಲಿಸ್ಟನ್ನು ಕೊಟ್ಟಿದ್ದಾರೆ.

SRI M. MALLIKARJUNA KHARGE.—I am very sorry. You expect that members should know everything and the man who is holding the portfolio is not holding the information.

ಅಧ್ಯಕ್ಷರು.—ಹಾಗಾದರೆ ನಿಮಗೆ ಇನ್‌ಫರ್‌ಮೇಷನ್ ಯಾವ ರೀತಿ ಕೊಡಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಎಲ್ಲ ಸದಸ್ಯರಿಗೂ ಅದನ್ನು ನೋಡಿಕೊಳ್ಳಿ ಎಂದಂ ಹೇಳುತ್ತೀರಾ ? ಸ್ಪಷ್ಟವಾಗಿ ಲುಕ್ಸಾನು ಎಷ್ಟಾಗಿದೆ ಎಂದು ಕೇಳುವಾಗ ?

ಶ್ರೀ ಆರ್. ವೆಂಕಟರಾಮಯ್ಯ.—ಬ್ಯೂರೋ ಆಫ್ ಎಂಟರ್‌ಪ್ರೈಸಸ್ ೧೯೮೫-೮೬ರವರೆಗೆ ವಿವರಗಳನ್ನು ಕೊಟ್ಟಿದ್ದಾರೆ. ಆದರ ಪ್ರಕಾರ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಆಫೀಸರುಗಳು ೧೦ ಲಕ್ಷ ೨೦ ಲಕ್ಷ ರೂಪಾಯಿಗಳನ್ನು ಲಪಟಾಯಿಸಿದ್ದಾರೆಂದು ಆರೋಪ ಇದೆ. ಮ್ಯಾನೇಜ್‌ಮೆಂಟ್ ಮತ್ತು ಚೇರ್‌ಮೆನ್‌ರವರು ವಿಂಸ್ ಆಪ್ರೇಷ್ಯಿಯೇಷನ್ ಮಾಡಿದ್ದಾರೆಂದು ಆಪಾದನೆಗಳು ಇವೆ. ಅದರ ಬಗ್ಗೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.—ಮಾನ್ಯ ಸದಸ್ಯರು ಸರಿಯಾದ ಮಾಹಿತಿಯನ್ನು ಒದಗಿಸಿ ಕೊಟ್ಟರೆ, ಸೂಕ್ತ ತನಿಖೆ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿನ ತಂತಿ ಕಾಣೆಯಾಗಿರುವುದು

೧೪೬೪. ಶ್ರೀ ಗೋಪಾಲಮಯ್ಯಂದ ಕಾನಡೆ (ಸಿರ್ಸಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಉತ್ತರ ಕನ್ನಡ ಜಿಲ್ಲೆಯ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯಲ್ಲಿ ತಂತಿಗಳು ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಸದರಿ ಕಾಣೆಯಾಗಿರುವ ತಂತಿಗಳ ಅಂದಾಜು ಮೊತ್ತವೆಷ್ಟು ?

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು).

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).—

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಯಾವ ಉಗ್ರಾಣದಲ್ಲೂ ತಂತಿಗಳು ಕಳುವಾಗಿಲ್ಲ. ಆದರೆ ೧೯೮೭ನೇ ಜೂನ್ ತಿಂಗಳಿಂದ ಇಲ್ಲಿಯವರೆಗೆ ಲೈನುಗಳಲ್ಲಿ ತಂತಿ ಕಳುವಾಗಿರುವ ೪ ಪ್ರಕರಣಗಳುಂಟಾಗಿವೆ.

(ಆ) ೪ ಪ್ರಕರಣಗಳಲ್ಲಿ ಕಳುವಾಗಿರುವ ತಂತಿಗಳ ಒಟ್ಟು ಉದ್ದ ೧೧ ಕಿಳ ಕಿ.ಮೀಟರುಗಳು ತಂತಿಯಂ ಒಟ್ಟು ಬೆಲೆ ೩೩,೫೫೦ ರೂ.ಗಳು

(ಇ) ಕಳುವಿನ ಪ್ರತಿ ಪ್ರಕರಣಗಳ ಬಗ್ಗೆ ಮಂಡಳಿಯವರು ಪೋಲೀಸ್ ಇಲಾಖೆಗೆ ದೂರು ನೀಡಲಾಗಿದ್ದು ಅವರಿಂದ ತನಿಖೆ ನಡೆಯುತ್ತಿದೆ. ಮಂಡಳಿಯು ಪೋಲೀಸ್ ಇಲಾಖೆಗೆ ಈ ಬಗ್ಗೆ ಜ್ಞಾಪನಾ ಪತ್ರ ಬರೆಯಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುವುದು.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ಉತ್ತರಿಸುವ ಇಪ್ಪತ್ತೇಳನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯು ಮಂದಿಡಲಾಯಿತು.

ಲೈನ್‌ಮನ್‌ರನ್ನು ನೇಮಕ ಮಾಡುವ ಬಗ್ಗೆ

೧೭೯. ಶ್ರೀ ಜಿ. ಎಸ್. ಶಿವಣಂಜಪ್ಪ (ಗುಬ್ಬಿ).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕು ವಿಂಡಿಗೇಶಿ ಮಂಡಲಿಗೆ ಸೇರಿದ ಕಸಾಪುರ, ರೆಡ್ಡಿಹಳ್ಳಿ, ಮಲ್ಲನಾಯಕನ ಹಳ್ಳಿ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯವನ್ನು ಯಾವಾಗ ಪ್ರಾರಂಭಿಸಲಾಯಿತು ?

(ಆ) ವಿದ್ಯುತ್ ಸೌಲಭ್ಯದಲ್ಲಿ ಆಡಚಣೆಗಳು ಏನಾದರೂ ಬಂದರೆ ಈ ಭಾಗಕ್ಕೆ ದುರಸ್ತಿ ಮಾಡಲು ಲೈನ್‌ಮನ್ ನೇಮಕ ಮಾಡಲಾಗಿದೆಯೇ ?

(ಇ) ಸದರಿ ಹಳ್ಳಿಗಳ ರೈತರುಗಳಿಗೆ ಲೈನ್‌ಮನ್‌ಗಳಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳು ಏನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಅ) ಕಸಾಪುರ ಗ್ರಾಮವನ್ನು ೧೫-೧೦-೧೯೭೩ರಲ್ಲೂ ರೆಡ್ಡಿಹಳ್ಳಿ ಗ್ರಾಮವನ್ನು ೨೩-೬-೧೯೭೮ರಲ್ಲೂ ಮಲ್ಲನಾಯಕನ ಹಳ್ಳಿ ೧-೯-೧೯೮೭ರಲ್ಲೂ ವಿದ್ಯುದ್ದೀಕರಣಗೊಳಿಸಲಾಯಿತು.

(ಆ) ಫ್ಯೂಸ್ ಕಂಪ್ಲೆಂಟ್, ಇತರೆ ತೊಂದರೆಗಳ ಬಗ್ಗೆ ಈ ಭಾಗದವರಿಂದ ವಿಡಿಗೇಶಿಗೆ ದೂರುಗಳು ಬಂದ ಕೂಡಲೇ ಅಲ್ಲಿಂದ ಲೈನ್‌ಮೆನ್‌ಗಳನ್ನು ಕಳುಹಿಸಿ ಆದಷ್ಟು ಜಾಗ್ರತೆ ಸರಿಪಡಿಸಲಾಗುತ್ತಿದೆ. ವಿಡಿಗೇಶಿಯ ಶಾಖಾಧಿಕಾರಿಗಳೂ ಕೂಡ ಅವಶ್ಯವಿದ್ದಾಗ ಸಾಧ್ಯವಿದ್ದಾಗಲೆಲ್ಲಾ ಸ್ಥಳಕ್ಕೆ ಭೇಟಿ ನೀಡಿ ಕೆಲಸದ ಮೇಲ್ವಿಚಾರಣೆ ನಡೆಸುತ್ತಾರೆ.

(ಇ) ಸದರಿ ಗ್ರಾಮಗಳ ಗ್ರಾಹಕರಿಂದ ವಿದ್ಯುತ್ ಸೌಲಭ್ಯದ ಆಡಚಣೆ ಬಗ್ಗೆ ದೂರು ಬಂದ ಕೂಡಲೇ ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಪರಿಶೀಲನೆ ನಡೆಸಿ ವ್ಯವಸ್ಥೆ ಅವಶ್ಯಕವೆನಿಸಿದರೆ ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.